

# ಬಾಲಿವುಡ್‌ಗೆ ಹೆದರುತ್ತಿದೆ ಹಾಲಿವುಡ್!



ಜಗತ್ತಿನ ಅತಿ ದೊಡ್ಡ ಸಿನಿಮೋದ್ಯಮ ಹಾಲಿವುಡ್, ಸೀಮಿತ ಪ್ರೇಕ್ಷಕರನ್ನು ಒಳಗೊಂಡಿರುವ ಬಾಲಿವುಡ್‌ಗೆ ಹೆದರುತ್ತಿದೆಯೇ? ಹೌದು ಎನ್ನುತ್ತಾರೆ ಬಿ ಟೌನ್ ಪಂಡಿತರು. ಹಾಲಿವುಡ್ ಚಿತ್ರಗಳ ಭಾರತೀಯ ಮಾರುಕಟ್ಟೆ ವಿಚಾರದಲ್ಲಿ ಈ ಮಾತು ಸತ್ಯವೂ ಆಗಿದೆ. ಇತರೆ ದೇಶಗಳಲ್ಲಿ ಲಾಭ ಗಳಿಸುವಂತೆಯೇ, ಭಾರತೀಯ ಮಾರುಕಟ್ಟೆಯಿಂದಲೂ ಹಾಲಿವುಡ್ ಭರ್ಜರಿ ಗಳಿಕೆಯನ್ನೇ ಕಾಣುತ್ತದೆ. ಈ ಮುಂಚೆ ಹಾಲಿವುಡ್ ಚಿತ್ರಗಳಲ್ಲಿ ಇಲ್ಲದ ಆತಂಕ ಈಗ ಮೂಡಿದೆ. ಭಾರತೀಯ ಚಿತ್ರಗಳಿಂದ ಅದು ತೀವ್ರ ಪೈಪೋಟಿ ಎದುರಿಸುತ್ತಿದೆ. ಹಾಲಿವುಡ್ ಚಿತ್ರಗಳನ್ನು ಭಾರತದಲ್ಲಿ ಬಿಡುಗಡೆ ಮಾಡುವ ಮುನ್ನ ಇಲ್ಲಿನ ಮಾರುಕಟ್ಟೆಯನ್ನು ಅಧ್ಯಯನ ಮಾಡುತ್ತಿದೆ ಹಾಲಿವುಡ್. ಬಾಲಿವುಡ್‌ನಲ್ಲಿ ಸ್ಟಾರ್ ನಟರ ಚಿತ್ರ ಬಿಡುಗಡೆಯಾಗುವಾಗ, ಜಾಗತಿಕ ಮಟ್ಟದಲ್ಲಿ ಖ್ಯಾತರಾಗಿರುವ ನಟರ ದೊಡ್ಡ ಚಿತ್ರಗಳನ್ನು ಭಾರತದಲ್ಲಿ ಬಿಡುಗಡೆ ಮಾಡುವ ಗೋಜಿಗೇ ಹೋಗುತ್ತಿಲ್ಲ. ಅದರಲ್ಲೂ ಶಾರೂಖ್ ಖಾನ್, ಅಜಯ್ ದೇವಗನ್ ಮತ್ತು ತಮಿಳು ನಟ ಸೂರ್ಯ ಅವರ ಚಿತ್ರಗಳ ಬಿಡುಗಡೆ ವೇಳೆ ಹಾಲಿವುಡ್ ಚಿತ್ರಗಳು ಇಲ್ಲಿ ತೆರೆಕಾಣುವುದಿಲ್ಲ.

ಸಿಲ್ವೆಸ್ಟರ್ ಸ್ಟಾಲೊನ್ನ 'ದಿ ಎಕ್ಸ್‌ಪೆಂಡಬಲ್ 3' ಆಗಸ್ಟ್ 15ಕ್ಕೆ ಭಾರತದಲ್ಲಿ ತೆರೆಕಾಣಬೇಕಿತ್ತು. ಆದರೆ ಅಂದೇ ಅಜಯ್ ದೇವಗನ್ ಅವರ 'ಸಿಂಗಂ ರಿಟರ್ನ್ಸ್' ಮತ್ತು ಸೂರ್ಯ ನಟನೆಯ 'ಅಂಜಾನ್' ಬಿಡುಗಡೆ ನಿಗದಿಯಾಗಿದ್ದರಿಂದ ಒಂದು ವಾರದ ನಂತರ 'ದಿ ಎಕ್ಸ್‌ಪೆಂಡಬಲ್ 3' ಬಿಡುಗಡೆಯಾಯಿತು. ಬ್ರಾಡ್ ಪಿಟ್ ಅವರ 'ಫ್ಯೂರಿ' ದೀಪಾವಳಿ ವೇಳೆಗೆ ತೆರೆ ಕಾಣಬೇಕಿತ್ತು. ಆದರೆ ಶಾರೂಖ್‌ರ 'ಹ್ಯಾಪಿ ನ್ಯೂ ಇಯರ್' ಬಿಡುಗಡೆ ಆಗುತ್ತಿರುವುದರಿಂದ ತಡವಾಗಿ ಭಾರತಕ್ಕೆ ಕಾಲಿರಿಸಲು ಚಿತ್ರತಂಡ ನಿರ್ಧರಿಸಿದೆ. ಇಲ್ಲಿನ ಚಿತ್ರರಂಗದೊಂದಿಗೆ ಅನಗತ್ಯ ಪೈಪೋಟಿ ಎದುರಿಸುವುದು ಬೇಡ ಎಂದು ಹಾಲಿವುಡ್ ಹಿಂದೇಟು ಹಾಕುತ್ತದೆ ಎನ್ನುವುದು ಕೆಲವರ ಅಭಿಪ್ರಾಯ. ಜಗತ್ತಿನಾದ್ಯಂತ ಸಿನಿಮಾ ಬಿಡುಗಡೆ ಮಾಡುವ ಹಾಲಿವುಡ್‌ಗೆ ಭಾರತದಲ್ಲಿನ ಸ್ಪರ್ಧೆ ದೊಡ್ಡದೇ ಎಂಬ ಪ್ರಶ್ನೆಯೂ ಇದೆ. ಲಾಭ ಗಳಿಕೆಯೇ ಸಿನಿಮಾದ ಉದ್ದೇಶವಾಗಿರುವುದರಿಂದ ಒಂದೆರಡು ವಾರದ ವಿಳಂಬದಿಂದ ಸಮಸ್ಯೆ ಏನೂ ಆಗುವುದಿಲ್ಲ ಎನ್ನುವುದು ಹಾಲಿವುಡ್ ಸಿನಿಮಾ ಕರ್ತೃಗಳ ಲೆಕ್ಕಾಚಾರ. 'ಗ್ರ್ಯಾವಿಟಿ' ಚಿತ್ರಕ್ಕೆ ಹಾಲಿವುಡ್ ಖರ್ಚು ಮಾಡಿದ್ದು ₹600 ಕೋಟಿ. ಆದರೆ ಭಾರತ ಕೇವಲ ₹450 ಕೋಟಿ ವೆಚ್ಚದಲ್ಲಿ ಮಂಗಳಯಾನವನ್ನೇ ಮಾಡಿದೆ ಎಂಬ ತಮಾಷೆಯ ಮಾತನ್ನು ಹಾಲಿವುಡ್ ಮುಂದೆ ಇನ್ನಷ್ಟು ಗಂಭೀರವಾಗಿ ಪರಿಗಣಿಸಬಹುದು!

■ ಅಮಿ